ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 18-01-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ – ರಾಷ್ಟ್ರೀಯ ಯುವ ಸಪ್ತಾಹ ರಾಜ್ಯ ಮಟ್ಟದ ಕಾರ್ಯಕ್ರಮ<br>ಉದ್ಘಾಟನೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br>ಮುಖ್ಯ ಅತಿಥಿಗಳು:<br>ಎಚ್.ಎನ್. ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ಸಚಿವರು<br>ಡಿ.ವಿ. ಸದಾನಂದಗೌಡ,<br>ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು<br>ಎಂ. ವೆಂಕಯ್ಯನಾಯ್ಡು,<br>ಕೇಂದ್ರ ನಗರಾಭಿವೃದ್ಧಿ ಸಂಸದೀಯ, ವ್ಯವಹಾರಗಳ ಸಚಿವರು<br>ಅಧ್ಯಕ್ಷತೆ:<br>ಆರ್.ರೋಷನ್ ಬೇಗ್, ಮೂಲ ಸೌಕರ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಖಾತೆ ಸಚಿವರು. | 19-01-2016<br>ಮಂಗಳವಾರ<br>ಬೆಳಿಗ್ಗೆ<br>11-00 ಗಂಟೆಗೆ | ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಂಗಳೂರು. |

| | | | |
|---|---|---|---|
| 2. | ಪತ್ರಿಕಾಗೋಷ್ಠಿ:<br>ಡಾ. ಬಂಜಗೆರೆ ಜಯಪ್ರಕಾಶ್,<br>ಅಧ್ಯಕ್ಷರು,<br>ಕನ್ನಡ ಪುಸ್ತಕ ಪ್ರಾಧಿಕಾರ | 19-01-2016<br>ಮಂಗಳವಾರ<br>ಬೆಳಿಗ್ಗೆ<br>11-00 ಗಂಟೆಗೆ | ಅಧ್ಯಕ್ಷರ ಕೊಠಡಿ,<br>ಕನ್ನಡ ಪುಸ್ತಕ ಪ್ರಾಧಿಕಾರ,<br>ಕನ್ನಡ ಭವನ,<br>ಜೆ.ಸಿ.ರಸ್ತೆ, ಬೆಂಗಳೂರು |
| 3. | **Southern India Science Fair:**<br><br>**Inauguration:**<br><br>**Sri Vajubhai Vala, Hon'ble. Governor of Karnataka**<br><br>**Preside:**<br><br>**Prof. Rahul Pandit,Chairman, Division of Physical and Mathematical Sciences, Indian Institute of Science, Bengaluru.** | 19-1-2016<br>**Tuesday at 3.00 PM** | **Auditorium Visvesvaraya Industrial and Technological Museum, Kastureba Road, Bengaluru.** |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ:

## ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳು

ಬೆಂಗಳೂರು, ಜನವರಿ 18 ( ಕರ್ನಾಟಕ ವಾರ್ತೆ ) :

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರವು ಆದೇಶದಲ್ಲಿ ತಿಳಿಸಿರುವ ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳ ಮಾರ್ಗಸೂಚಿಗಳು ಇಂತಿವೆ.

ಜನವರಿ 19 ರಂದು ಕೌಶಲ್ಯ ಅಭಿವೃದ್ಧಿ ನಿಮಿತ್ತ ಯುವಜನರು ತಯಾರಿಸಿದ ಕೌಶಲ್ಯ ಅಭಿವೃದ್ಧಿ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು, ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು, ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವಜನತೆಗೆ ತಲುಪಿಸುವುದು ಮತ್ತು ರಾಷ್ಟ್ರೀಯ ಯುವ ಸಪ್ತಾಹದ ಕ್ರೋಢಿಕರಣ ಮಾಡುವುದು.

ರಾಜ್ಯದ ಸರ್ಕಾರದ ಆದೇಶದಲ್ಲಿ ಮೇಲೆ ಕಾಣಿಸಿದ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಜನವರಿ 19 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನಾಗಿ ಆಚರಿಸುವುದು.

ಮಾರ್ಗಸೂಚಿಗಳ ಅನುಸಾರ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಪ್ರತಿ ವರ್ಷ ತಪ್ಪದೇ ಕಡ್ಡಾಯವಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ

## ಭೂಮಿ ಸೇವೆ/ಮ್ಯುಟೇಷನ್‌ಗೆ ನಾಡ ಕಚೇರಿಯಲ್ಲಿ ಅರ್ಜಿ ಸ್ವೀಕಾರ

ಬೆಂಗಳೂರು, ಜನವರಿ 18 ( ಕರ್ನಾಟಕ ವಾರ್ತೆ ) :

ಭೂಮಿ ಸೇವೆ ಮತ್ತು ಮ್ಯುಟೇಷನ್‌ಗಾಗಿ ತಾಲ್ಲೂಕು ಕಚೇರಿಯಲ್ಲಿನ ಭೂಮಿ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಪ್ರಸ್ತುತ, ಸದರಿ ಸೇವೆಗಳಿಗಾಗಿ ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ಹೋಬಳಿ ಮಟ್ಟದ ನಾಡ ಕಚೇರಿಗಳಿಗೆ ವಿಸ್ತರಿಸಲಾಗಿರುತ್ತದೆ.

ಅದರಂತೆ, ಭೂಮಿ ಕೇಂದ್ರಗಳಲ್ಲಿ ಭೂಮಿ ಸೇವೆ/ಮ್ಯೂಟೇಷನ್‌ನ ಈ ಕೆಳಕಂಡ ಸೇವೆಗಳಿಗಾಗಿ ಸ್ವೀಕರಿಸುತ್ತಿದ್ದ ಅರ್ಜಿಗಳನ್ನು ಇನ್ನು ಮುಂದೆ ರಾಜ್ಯದ ಎಲ್ಲಾ ನಾಡ ಕಚೇರಿಗಳಲ್ಲಿ ಸ್ವೀಕರಿಸಲಾಗುತ್ತದೆ.

ಖಾತಾ ಬದಲಾವಣೆ (ಪೌತಿ, ವಿಲ್ ಮತ್ತು ಮೈನರ್ ಗಾರ್ಡಿಯನ್) ಸರ್ಕಾರಿ ಆದೇಶ (ಭೂ ಮಂಜೂರು, ಭೂ ಸುಧಾರಣೆ ಮಂಜೂರು, ಮರು ಮಂಜೂರು) ಕೋರ್ಟ್ ತಡೆ( ತಡೆ ಆಜ್ಞೆ, ತಡೆ ಬಿಡುಗಡೆ, ಹಕ್ಕು ಮತ್ತು ಋಣಭಾರ (ಆಧಾರ/ಆಧಾರ/ಭೋಗ್ಯ ಬಿಡುಗಡೆ, ಸರ್ಕಾರಿ ನಿಬಂಧನೆ) ಭೂ ಪರಿವರ್ತನೆ (ನಿವೇಶನ, ಕಾರ್ಖಾನೆ ಇತ್ಯಾದಿ) ತಕರಾರು (30 ದಿವಸಗಳ ನೋಟಿಸ್ ಅವಧಿಯೊಳಗೆ ಇರುವ ವಹಿವಾಟುಗಳಿಗೆ)

ನಾಡಕಚೇರಿಗಳಲ್ಲಿ ಈ ಮೇಲಿನ ಭೂಮಿ ಸೇವೆಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗುವುದರಿಂದ, ಸಾರ್ವಜನಿಕರು ದೂರದ ತಾಲ್ಲೂಕು ಕಛೇರಿಯಲ್ಲಿರುವ ಭೂಮಿ ಕೇಂದ್ರಗಳಿಗೆ ಪ್ರಯಾಣಿಸಿ ಅರ್ಜಿಗಳನ್ನು ಸಲ್ಲಿಸುವುದನ್ನು ತಪ್ಪಿಸಿ, ಅವರ ಗ್ರಾಮದ ಸಮೀಪದಲ್ಲಿರುವ ಹೋಬಳಿ ಕೇಂದ್ರದ ನಾಡಕಚೇರಿಗಳಲ್ಲಿಯೇ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಬಾಬು/ಕೆಎಂ

# ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 18 ( ಕರ್ನಾಟಕ ವಾರ್ತೆ ) :

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವ್ಯಾಪ್ತಿಗೆ ಒಳಪಡುವ ಸಂಗೀತ ನೃತ್ಯಾದಿ ಕಲೆಗಳಲ್ಲಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪಂಗಡ ಪರಿಣಿತ ಕಲಾವಿದರು/ತಜ್ಞರಿಂದ ಸಂಶೋಧನೆಗಾಗಿ-ಫೆಲೋಶಿಪ್ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉಚಿತವಾಗಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಅಥವಾ www.kannadasiri.co.in ಅಂತರ್‌ಜಾಲದಲ್ಲಿಯೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಂಚೆ ಮೂಲಕ ಅರ್ಜಿ ಪಡೆಯಲಿಚ್ಛಿಸುವವರು ರೂ. 10-00 (ರೂ. ಹತ್ತುಗಳು ಮಾತ್ರ) ಸ್ಟಾಂಪ್ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-560 002 ಇಲ್ಲಿಗೆ ಕಳುಹಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ: 30-1-2016.

ಬಾಬು/ಕೆಎಂ

# ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 18 ( ಕರ್ನಾಟಕ ವಾರ್ತೆ ) :

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಸಂಗೀತ ನೃತ್ಯದಲ್ಲಿ ಪ್ರಕಟವಾಗಿರುವ ಕನ್ನಡ ಉತ್ತಮ ಪುಸ್ತಕಕ್ಕೆ ಬಹುಮಾನ ನೀಡಲು ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಸುಗಮ ಸಂಗೀತ, ನೃತ್ಯ ಕಥಾ ಕೀರ್ತನ, ಗಮಕ ಈ ಕಲಾಪ್ರಕಾರಗಳಲ್ಲಿ 2011-12, 2012-13, 2013-14 ಹಾಗೂ 2014-15 ನೇ ಸಾಲಿಗೆ ಆಯಾ ವರ್ಷದ ಕ್ಯಾಲೆಂಡರ್ ವರ್ಷದಲ್ಲಿ ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟಿಸಿರುವ ಪುಸ್ತಕಗಳನ್ನು ಬಹುಮಾನಕ್ಕೆ ಸಲ್ಲಿಸಬಹುದು.

ಪ್ರಥಮ ಮುದ್ರಣವೃತ್ತಿಯಾಗಿರಬೇಕು. ಬಹುಮಾನಕ್ಕೆ ಅರ್ಜಿ ಸಲ್ಲಿಸುವವರು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು- 560002 ಇವರಿಗೆ 30-1-2016 ರ ಒಳಗಾಗಿ ಅರ್ಜಿಯೊಂದಿಗೆ ಪುಸ್ತಕದ 4 ಪ್ರತಿಗಳನ್ನು ಕಳುಹಿಸುವುದು. ಹೆಚ್ಚಿನ ವಿವರ ಹಾಗೂ ಅರ್ಜಿಗಳಿಗೆ ದೂರವಾಣಿ 080- 22215072 ಮೂಲಕ ಸಂಪರ್ಕಿಸಿಯೂ ಹೆಚ್ಚಿನ ಮಾಹಿತಿ ಪಡೆಯಬಹುದು.

ಬಾಬು/ಕೆಎಂ

**8ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂಘಟನಾ ಸಮಿತಿ ಸಭೆ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳು ಇಂದು ನಡೆಸಿದ ಪತ್ರಿಕಾಗೋಷ್ಠಿಯ ಮುಖ್ಯಾಂಶಗಳು**

- ಜನವರಿ 28, 2016, ಸಂಜೆ 5.30 ಗಂಟೆಗೆ ವಿಧಾನಸೌಧದ ಪೂರ್ವ ದ್ವಾರದ ಗ್ರ್ಯಾಂಡ್ ಸ್ಟೆಪ್ಸ್ ಮುಂಭಾಗದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ.
- ಭಾರತೀಯ ಚಿತ್ರರಂಗದ ಹಿರಿಯ ಕಲಾವಿದೆ, ಶ್ರೀಮತಿ **ಜಯಾ ಬಚ್ಚನ್** ರವರು ಉದ್ಘಾಟಿಸುವರು.
- ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷತೆ ವಹಿಸುವರು
- ಹಿಂದಿ ಚಿತ್ರರಂಗದ ಖ್ಯಾತ ನಿರ್ದೇಶಕ, ನಿರ್ಮಾಪಕ ಶ್ರೀ **ಸಂಜಯ್ ಲೀಲಾ ಬನ್ಸಾಲಿ** ಚಿತ್ರೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು
- ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಚಿತ್ರ ಸಾಹಿತಿಗಳು ಹಾಗೂ ನಿರ್ದೇಶಕ **ಶ್ರೀ ಗುಲ್ಜಾರ್,** ಭಾರತೀಯ ಸಂಜಾತ, ಹಾಲಿವುಡ್ ಚಿತ್ರ ನಿರ್ಮಾಪಕ ಶ್ರೀ **ಅಶೋಕ್ ಅಮೃತ್‌ರಾಜ್** ಹಾಗೂ ಬೆಂಗಾಲಿ ಹಾಗೂ ಹಿಂದಿ ಚಿತ್ರನಟಿ ಮತ್ತು ನಿರ್ದೇಶಕಿ ಶ್ರೀಮತಿ **ಅಪರ್ಣಾ ಸೇನ್** ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.
- ದೇಶವಿದೇಶಗಳ ಹಾಗೂ ಕನ್ನಡ ಚಿತ್ರೋದ್ಯಮದ ಗಣ್ಯರೂ ಸೇರಿದಂತೆ ಸುಮಾರು ಸಮಾರಂಭದಲ್ಲಿ 2000 ಗಣ್ಯರ ಉಪಸ್ಥಿತಿ
- ಲೊಕಾರ್ನೋ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿ ಹಾಗೂ ವಿವಿಧ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಪಡೆದಿರುವ ಕನ್ನಡಿಗ ಶ್ರೀ ರಾಮರೆಡ್ಡಿ ಅವರ ನಿರ್ದೇಶನದ ಕನ್ನಡ ಚಿತ್ರ **'ತಿಥಿ'** ಉದ್ಘಾಟನಾ ಚಿತ್ರ.
- ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದೆ ಶ್ರೀಮತಿ ಶೋಭನಾ ಹಾಗೂ ಶ್ರೀಮತಿ ನಿರುಪಮಾ ರಾಜೇಂದ್ರ ಅವರಿಂದ ಉದ್ಘಾಟನೆಗೆ ಮುನ್ನ 30 ನಿಮಿಷಗಳ ಸಾಂಸ್ಕೃತಿಕ ಕಾರ್ಯಕ್ರಮ.
- ಕಂದಾಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಮೈಸೂರಿನಲ್ಲಿ ಜನವರಿ 28 ರಂದು ಸಂಜೆ 5.00 ಗಂಟೆಗೆ ಕಲಾ ಮಂದಿರದಲ್ಲಿ ಚಿತ್ರೋತ್ಸವ ಉದ್ಘಾಟನೆ ಅಲ್ಲಿಯೂ ಉದ್ಘಾಟನಾ ಚಿತ್ರವಾಗಿ **'ತಿಥಿ'** ಪ್ರದರ್ಶನ.

**ಚಿತ್ರೋತ್ಸವದ ವೈಶಿಷ್ಟ್ಯಗಳು:**

- ಈ ಚಿತ್ರೋತ್ಸವ ಹಲವು ಪ್ರಥಮಗಳಿಗೆ ಸಾಕ್ಷಿ.

- ಮೊದಲ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂಘಟನಾ ಸಮಿತಿಯ ಗೌರವಾಧ್ಯಕ್ಷರಾಗಿದ್ದಾರೆ.
- ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವರು ಕಾರ್ಯಕಾರಿ ಅಧ್ಯಕ್ಷರಾಗಿದ್ದಾರೆ.
- ಖ್ಯಾತ ನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಜಯಮಾಲ ಅವರು ಕಲಾತ್ಮಕ ನಿರ್ದೇಶಕರಾಗಿದ್ದಾರೆ.
- ಮೊದಲ ಬಾರಿಗೆ ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಏಕಕಾಲಕ್ಕೆ ಚಿತ್ರೋತ್ಸವ.
- ಒಂದೇ ಸೂರಿನಡಿ ಚಲನಚಿತ್ರಗಳ ಪ್ರದರ್ಶನ.
    - ಬೆಂಗಳೂರಿನ ರಾಜಾಜಿನಗರದ ಓರಿಯನ್ ಮಾಲ್‌ನಲ್ಲಿರುವ ಪಿವಿಆರ್ ಸಿನಿಮಾದ 11 ಸ್ಕ್ರೀನ್‌ಗಳಲ್ಲಿ ಚಿತ್ರ ಪ್ರದರ್ಶನ
    - ಮೈಸೂರಿನ ಮಾಲ್ ಆಫ್ ಮೈಸೂರಿನ ಐನಾಕ್ಸ್ ಚಿತ್ರಮಂದಿರದ 4 ತೆರೆಗಳಲ್ಲಿ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.
    - ಪ್ರತಿ ತೆರೆಯಲ್ಲಿ ಪ್ರತಿ ದಿನ 5 ಚಿತ್ರಗಳ ಪ್ರದರ್ಶನ
    - ಪ್ರತಿ ದಿನ ಬೆಂಗಳೂರು ಮತ್ತು ಮೈಸೂರುಗಳಲ್ಲಿ 12,000 ಪ್ರೇಕ್ಷಕರು ಚಿತ್ರ ವೀಕ್ಷಿಸಲು ಅವಕಾಶ.

**ಚಿತ್ರೋತ್ಸವದ ವಿವರಗಳು:**

- 50 ದೇಶಗಳ 172 ಚಿತ್ರಗಳು 7 ದಿನಗಳ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿದೆ.
- ಸ್ಪರ್ಧಾತ್ಮಕ ವಿಭಾಗವನ್ನು 3 ಭಾಗವಾಗಿ ವಿಂಗಡಿಸಲಾಗಿದೆ.
    1. ಏಶಿಯನ್ ಸ್ಪರ್ಧೆ
    2. ಭಾರತೀಯ ಚಿತ್ರಗಳು
    3. ಕನ್ನಡ ಚಿತ್ರಗಳು.
- ಚಿತ್ರೋತ್ಸವದ ಸ್ಪರ್ಧೆಯಲ್ಲಿ
  ಏಶಿಯಾ ವಿಭಾಗದಿಂದ 12 ಚಿತ್ರಗಳು,
  ಭಾರತೀಯ ವಿಭಾಗದಲ್ಲಿ 13 ಚಿತ್ರಗಳು,
  ಕನ್ನಡ ವಿಭಾಗದಲ್ಲಿ 15 ಚಿತ್ರಗಳು,

- **ಪ್ರಮುಖ ಅಂಶಗಳು:**

1. ಸಮಕಾಲೀನ ಜಾಗತಿಕ ಚಿತ್ರಗಳ ಪ್ರದರ್ಶನ
2. ಮೆಕ್ಸಿಕೋ, ಇರಾನ್, ಟರ್ಕಿ ದೇಶಗಳ ಚಿತ್ರಗಳ ವಿಶೇಷ ಅವಲೋಕನ

3. ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾದ ಹಂಗೇರಿಯ ಇಸ್ತ್ವಾನ್ ಝಬೋ ಹಾಗೂ ಡೆನ್‌ಮಾರ್ಕ್‌ನ ನಿಲ್ಸ್ ಮ್ಯಾಲ್ಮರೋಸ್ ಅವರ ಚಿತ್ರಗಳ ವಿಶೇಷ ಪ್ರದರ್ಶನ.
4. ಕಲಾವಿದರ ಸಿಂಹಾವಲೋಕನ ವಿಭಾಗದಲ್ಲಿ ಪಂಚಭಾಷಾ ತಾರೆ, ಪದ್ಮಭೂಷಣ ಡಾ: **ಬಿ.ಸರೋಜಾ ದೇವಿ** ಅವರ ಚಿತ್ರಗಳ ಪ್ರದರ್ಶನ
5. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರ ಚಿತ್ರ ಪ್ರದರ್ಶನದಲ್ಲಿ **ಮೃಣಾಲ್ ಸೇನ್** ಹಾಗೂ **ಅಡೂರ್ ಗೋಪಾಲ್ ಕೃಷ್ಣನ್** ಅವರ ಚಿತ್ರಗಳ ಪ್ರದರ್ಶನ.
6. ಕನ್ನಡದ ಖ್ಯಾತ ಚಿತ್ರ ನಿರ್ದೇಶಕರಾದ ಶ್ರೀ **ಸಿದ್ಧಲಿಂಗಯ್ಯ** ಹಾಗೂ ಶ್ರೀ **ಕೆಎಸ್‌ಎಲ್ ಸ್ವಾಮಿ (ರವೀ)** ಅವರಿಗೆ ನಮನ ಸಲ್ಲಿಸಲು ಅವರ ಚಿತ್ರಗಳ ಪ್ರದರ್ಶನ.
7. ಮೊದಲ ಬಾರಿಗೆ ಸಾಕ್ಷ್ಯಚಿತ್ರಗಳ ಪ್ರದರ್ಶನ. **ಬರ** ಕುರಿತಂತೆ ದೇಶ ವಿದೇಶಗಳಲ್ಲಿ ಸಿದ್ಧಗೊಂಡಿರುವ ಸಾಕ್ಷ್ಯಚಿತ್ರಗಳ ಪ್ರದರ್ಶನ.
8. ಆತ್ಮಕಥಾ ಚಿತ್ರಗಳ ವಿಶೇಷ ವಿಭಾಗದಲ್ಲಿ ಚಿತ್ರ ನಿರ್ದೇಶಕರು, ಕಲಾವಿದರು, ಸಾಹಿತಿಗಳು ಮತ್ತು ಸಂಗೀತಗಾರರ ಕುರಿತ ಸಾಕ್ಷ್ಯಚಿತ್ರಗಳ ಪ್ರದರ್ಶನ.

**ಜಗತ್ತಿನ ಅತ್ಯುತ್ತಮ ನಿರ್ದೇಶಕರ ಚಿತ್ರಗಳು:**

- ಬರ್ಲಿನ್, ಕಾನ್ಸ್, ಟೊರೆಂಟೋ, ಗೋವಾ, ಮುಂಬೈ ಹಾಗೂ ಕೇರಳಾ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ಅತ್ಯುತ್ತಮ ಏಶಿಯನ್ ಮತ್ತು ಜಾಗತಿಕ ಸಿನಿಮಾಗಳನ್ನು ಪ್ರದರ್ಶನ.
- ಚಿತ್ರೋತ್ಸವದಲ್ಲಿ 50ಕ್ಕೂ ಹೆಚ್ಚು ದೇಶಿ ಹಾಗೂ ವಿದೇಶಿ ಗಣ್ಯರು ಭಾಗವಹಿಸಲಿದ್ದಾರೆ. (ಪ್ರದರ್ಶನಗೊಳ್ಳಲಿರುವ ಚಿತ್ರಗಳ ಪಟ್ಟಿ ಇದರೊಂದಿಗಿದೆ)

**ಆಹ್ವಾನಿತ ಪ್ರತಿನಿದಿಗಳು:**

- ಚಿತ್ರ ನಿರ್ದೇಶಕರು, ಪತ್ರಕರ್ತರು, ಚಿತ್ರ ವಿಮರ್ಶಕರು, ಚಿತ್ರೋತ್ಸವ ಆಯೋಜಕರು, ಚಿತ್ರ ಶಿಕ್ಷಣವೇತರು ಸೇರಿದಂತೆ ವಿಶ್ವದಾದ್ಯಂತ ಚಲನಚಿತ್ರ ಪ್ರಮುಖರು ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ದೆಹಲಿ ಮತ್ತು ಬೆಂಗಳೂರುಗಳಲ್ಲಿ ಇರುವ ವಿದೇಶಿ ರಾಯಭಾರಿ ಅಧಿಕಾರಿಗಳು, ವಿದೇಶಿ ಸಾಂಸ್ಕೃತಿಕ ಸಂಘಟನೆಗಳ ಪ್ರತಿನಿಧಿಗಳು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.
- ಭಾರತದ ಆಹ್ವಾನಿತ ಪ್ರತಿನಿಧಿಗಳಲ್ಲಿ ಬೆಂಗಾಲ, ಒರಿಸ್ಸಾ, ಮಹಾರಾಷ್ಟ್ರ, ಕೇರಳ ಮತ್ತು ತಮಿಳು ನಾಡುಗಳ ಚಿತ್ರ ನಿರ್ಮಾಪಕರು, ಚಿತ್ರೋತ್ಸವ ಸಂಘಟಕರು ಮತ್ತು ವಿಮರ್ಶಕರು ಒಳಗೊಂಡಿದ್ದಾರೆ.
- ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಕನ್ನಡ ಚಿತ್ರಗಳ ನಿಮಾತೃಗಳು ಮತ್ತು ಅವರ ತಂಡವನ್ನು ಚಿತ್ರೋತ್ಸವಕ್ಕೆ ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗುವುದು.

**ವಿಚಾರ ಸಂಕಿರಣ, ಕಮ್ಮಟ ಮತ್ತು ಮಾಸ್ಟರ್ ಕ್ಲಾಸಸ್:**

- ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರು, ಕಲಾವಿದರು, ತಂತ್ರಜ್ಞರು, ನಿರ್ಮಾಪಕರು, ಮಾಸ್ಟರ್ ಕ್ಲಾಸ್ ನಲ್ಲಿ ಭಾಗವಹಿಸುವರು.

- ಶ್ರೀ ಗುಲ್ಜಾರ್, ಶ್ರೀಮತಿ ಜಯಬಚ್ಚನ್, ಶ್ರೀ ಅಶೋಕ್ ಅಮೃತರಾಜ್, ಶ್ರೀ ಮಣಿರತ್ನಂ, ಶ್ರೀಮತಿ ಸುಹಾಸಿನಿ ಮಣಿರತ್ನಂ, ಶ್ರೀ ಸಂಜಯ್ ಲೀಲಾ ಬನ್ಸಾಲಿ, ಶ್ರೀ ನಾನಾ ಪಾಟೇಕರ್, ಶ್ರೀಮತಿ ಅಪರ್ಣ ಸೇನ್, ಶ್ರೀ ಪಣಿ ಎಗೋನ್ ಮುಂತಾದ ಚಿತ್ರ ತಜ್ಞರು ಸಂವಾದದಲ್ಲಿ ಭಾಗವಹಿಸುವರು.

- ಛಾಯಾಗ್ರಹಣಕ್ಕೆ ಸಂಬಂಧಿಸಿದ ದಾದಾ ಸಾಹೇಬ ಪಾಲ್ಕೆ ಪ್ರಶಸ್ತಿ ಪುರಸ್ಕೃತ ವಿ.ಕೆ.ಮೂರ್ತಿ ಸ್ಮಾರಕ ಉಪನ್ಯಾಸವನ್ನು ಲಗಾನ್, ವೀರಜಾರ ಖ್ಯಾತಿಯ ಛಾಯಾಗ್ರಾಹಕ ಶ್ರೀ ಅನಿಲ್ ಮೆಹತಾ ನಡೆಸಿಕೊಡಲಿದ್ದಾರೆ.

- ಧ್ವನಿ ತಂತ್ರ ವಿನ್ಯಾಸದ ಕಮ್ಮಟವನ್ನು ಆಸ್ಕರ್ ಪ್ರಶಸ್ತಿ ಪುರಸ್ಕೃತ ಧ್ವನಿ ವಿನ್ಯಾಸಗಾರ ಶ್ರೀ ರಸೂಲ್ ಪೂಕುಟ್ಟಿ ನಡೆಸಲಿದ್ದಾರೆ.

- ಹೊಸ ಡಿಜಿಟಲ್ ತಂತ್ರಜ್ಞಾನದ ಕುರಿತಂತೆ ವಿಶೇಷ ಚರ್ಚೆಯನ್ನು ಬಾಹುಬಲಿ ಚಿತ್ರಕ್ಕೆ ಕೆಲಸ ಮಾಡಿದ ಶ್ರೀ ಪಣಿ ಎಗೋನ್ ನಡೆಸಿಕೊಡಲಿದ್ದಾರೆ.

- ಜನವಾಧಿ ಮಹಿಳಾ ಸಂಘಟನೆಯ ಆಶ್ರಯದಲ್ಲಿ ಲಿಂಗ ಸಂವೇದನೆ (ಜಂಡರ್ ಸೆನ್ಸ್‌ಟಿವಿಟಿ) ಕುರಿತು ವಿಚಾರ ಸಂಕಿರಣ.

- ಚಿತ್ರಕಥಾ ರಚನೆ, ಸಾಕ್ಷ್ಯಚಿತ್ರ ನಿರ್ಮಾಣ ಕುರಿತ ಮಾಸ್ಟರ್ ಕ್ಲಾಸ್‌ಗಳಲ್ಲಿ ದೆಹಲಿಯ ಶ್ರೀಮತಿ ಸಮೀರಾಜೈನ್, ಶ್ರೀಲಂಕಾದ ಪ್ರಸನ್ನ ವಿತನಗೆ ಮತ್ತು ಅರ್ಮೇನಿಯಾದ ಹರುತ್ಯುನ್ ಕಚಾಥ್ರಿಯನ್ ಮುಂತಾದವರು ಭಾಗವಹಿಸಲಿದ್ದಾರೆ.

- ನೆಟ್‌ಪ್ಯಾಕ್ ನಿಂದ ಏಶ್ಯನ್ ಚಿತ್ರಗಳನ್ನು ವಿವಿಧ ಚಿತ್ರೋತ್ಸವಗಳಲ್ಲಿ ಪಾಲ್ಗೊಳ್ಳಲು ಕೈಗೊಂಡ ಕಾರ್ಯಗಳ ಕುರಿತ ವಿವರ.

- ಫಿಪ್ರೆಸ್ಕಿ 90 ವರ್ಷಗಳಾದ ಸಂದರ್ಭದಲ್ಲಿ ಚಲನಚಿತ್ರ ವಿಮರ್ಶೆಯ ಕುರಿತಂತೆ ಚಿತ್ರ ನಿರ್ಮಾತೃಗಳು ಮತ್ತು ವಿಮರ್ಶಕರ ನಡುವೆ ಸಂವಾದ.

ಈ ಎಲ್ಲಾ ಕಾರ್ಯಕ್ರಮಗಳು ಪಿವಿಆರ್ ಸಿನಿಮಾಸ್‌ನಲ್ಲಿ ನಡೆಯಲಿದೆ.

**ನೋಂದಣಿ ಮಾಹಿತಿ:**

- ಚಿತ್ರಾಸಕ್ತರಿಗಾಗಿ ನೋಂದಣಿ ಕೇಂದ್ರಗಳು:

  - ಬೆಂಗಳೂರಿನಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ, ಬಾದಾಮಿ ಹೌಸ್, ಕಾರ್ಪೋರೇಷನ್ ಎದುರು, ಎನ್.ಆರ್.ಚೌಕ
  - ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ 2 ನೇ ಹಂತ, ಬೆಂಗಳೂರು
  - ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕ್ರೆಸೆಂಟ್ ರಸ್ತೆ, ಶಿವಾನಂದ ವೃತ್ತ, ಬೆಂಗಳೂರು
  - ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು
  - ಮೈಸೂರಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧನ್ವಂತರಿ ರಸ್ತೆ
  - ಆನ್‌ಲೈನ್ ನೋಂದಣಿಯೂ ಲಭ್ಯವಿದೆ–
    biffes.in

**ನೋಂದಣಿ ಶುಲ್ಕ:**

- ಕಳೆದ ವರ್ಷದಂತೆಯೇ ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ.
- ಸಾರ್ವಜನಿಕರಿಗೆ 600/– ರೂ.ಗಳು
- ಚಿತ್ರ ಸಂಸ್ಥೆಗಳು, ಚಿತ್ರ ಕ್ಲಬ್‌ಗಳ ಸದಸ್ಯರು, ಚಿತ್ರೋದ್ಯಮದವರು, ಹಿರಿಯ ನಾಗರಿಕರು ಮತ್ತು 18 ವರ್ಷಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 300/– ರೂ.ಗಳು
- ನೋಂದಣಿ ಮಾಡಿಸಿಕೊಂಡವರು ಬೆಂಗಳೂರು ಮತ್ತು ಮೈಸೂರುಗಳಲ್ಲಿ ಪಾಸ್‌ನ್ನು ಬಳಸಬಹುದು.

**ಸಮಾರೋಪ: ಮೈಸೂರು**

- ಫೆಬ್ರವರಿ 5, 2016 ರಂದು ಸಂಜೆ 5.00 ಗಂಟೆಗೆ
- ಸ್ಥಳ: ಅರಮನೆ ಮುಂಭಾಗದಲ್ಲಿ ,
- ಘನತೆವೆತ್ತ ರಾಜ್ಯಪಾಲರನ್ನು ಪ್ರಶಸ್ತಿ ವಿತರಣೆಗೆ ಆಹ್ವಾನಿಸಲಾಗಿದೆ.
- ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆ
- ಸಮಾರೋಪ ಸಮಾರಂಭ ಸಾಂಸ್ಕೃತಿಕ ಕಾರ್ಯಕ್ರಮವನ್ನು ಒಳಗೊಂಡಿರುತ್ತದೆ.

- ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಅಂದು ಚಿತ್ರೋದ್ಯಮಕ್ಕೆ ರಜೆ ಘೋಷಣೆ
- ಖ್ಯಾತ ನಟ ಶ್ರೀ ಕಮಲಹಾಸನ್ ಅವರನ್ನು ಆಹ್ವಾನಿಸಲಾಗಿದೆ.
- ಕನ್ನಡ ಚಿತ್ರರಂಗದ ಖ್ಯಾತ ನಟ/ನಟಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ

# Highlights of Chief Minister's Press Conference

**The 8th edition of Bengaluru International Film Festival will be held in Bengaluru and Mysuru Simultaneously.**

**The Inauguration of the Festival will be held on the evening of Thursday, January 28, 2016, in front of Vidhana Soudha at 5.30 PM.**

**Mrs Jaya Bachhan, Eminent Actor will inaugurate the festival.**

**The distinguished guests include Shri Gulzar, Dadasaheb Phalke Award Winner,**
**Mr. Ashok Amritraj, Hollywood Producer**
**Shri Sanjay Leela Bhansali, Well known Director**
**Shri D. Venkatesh, Telugu Film Star**
**Ms. Aparna Sen, Distinguished filmmaker from Bengal**

**Cultural Events include Dance recital Ms Shobana & Nirupama Rajendra**

Regular screenings for the Delegates will commence on January 29, 2016.

**The screenings will be held at 11 screens - PVR Cinemas, Rajajinagar, Bengaluru**
**4 screens - INOX Cinemas, Mall of Mysuru**

**The Content of the Festival: Total 172 films – about 50 Countries - under various categories**

## Highlights of the Festival Films:

**Competition Section : Asian Competition**
**Indian Competition**
**Kannada Competition**

**Like in the previous edition, there will also be an additional International Jury for Kannada Cinema which will culminate in a special NETPAC award.**

**Contemporary Cinema of world**
**Country Focus : Mexico, Iran, Turkey**
**Directors' Retrospectives : Istvan szabo of Hungary & Nils Malmros of Denmark**

**Artist Retrospective : Dr. B. Sarojadevi**
**Dada Saheb Phalke Award Winners' Vintages : Mrinal Sen,**
**Adoor Gopalakrishnan**

**Tributes : Siddalingaiah**
**K S L Swamee (Ravee)**

**Quite a good number of films in Asian Category and rest of the World have reputation of having participated in other major international film festivals of Berlin, Cannes, Toronto, Goa, Mumbai, Kerala etc.,**

Films made by world renowned filmmakers such as Istvan Szabo from Hungary, Jafer Panahi from Iran, Jia Zhang Ke from China, Hou Hsiao-Hsien from Japan, Emin Alper from Turkey, Jacques Audiard from France, Christian Petzold from Germany, Nanni Moretti from Italy and others are being screened in the event.

BIFFES has two special sections: FIPRESCI Film Critics Award Winners and NETPAC Award winners, which are always the unique features of our event.

A new section for Documentary films is being started from this edition. The section is being curated by "Vikalp", a voluntary organization involved in presentation of documentary films in Bengaluru

**Under this section, involving presentation of documentary films from India and abroad, retrospective of a Director, BIFFES will also be focusing on the issue of ``Drought as a consequence of climate change" as a contemporary thematic concern through screening of films and discussions**.

There will also be a special section on Biographical pictures generally referred to as "BIOPICS" which includes documentaries made on film makers, Writers, Artists , Musicians etc.,

List of films attached.

## Invited Delegates:

**Invited delegates will include film makers, journalists, Film Critics, Film festival Programmers, Academicians etc., from across the world. Large participation of Foreign Consulate officials, Foreign cultural organization representatives in India from Delhi and Bengaluru is also expected.**

**Indian delegates include filmmakers, Film Festival organisers and critics from Bengal, Odissa, Maharashtra, Delhi, Kerala and Tamilnadu.**

**Kannada filmmakers and their team whose films are on show in the festival will be invited for the festival as special guests.**

**Workshops, Seminars and Master Classes will also be held during the course of the Festival.**

**The scheduled programmes are:**

**1. Special interaction with Mr. Gulzar, Mrs. Jaya Bachhan, Mr. Ashok Amritraj, Mr Manirathnam and Ms. Suhasini Manirathnam, Sanjay Leela Bhansali, Nana Patekar and Aparna Sen**

2. Dadasaheb Award Winner Late V.K. Murthy memorial lecture to be delivered by Mr. Anil Mehta, Ace Cinematographer from Mumbai known for his works like "Lagaan" "Veer Zaara" etc.,

3. Workshop on Sound Design by Mr Resul Pookutty, Oscar award winning Sound designer

4. Special discussion on emerging technologies – Bengaluru as a backend hub for global digital film making processes – VFX, Animation etc., Interaction with Mr.Phani Egone who has worked for the successful film "Bahubali"

5. Seminar on "Gender Sensitivity" – to be organized by some women groups of Bengaluru under Janavadi Mahila Sanghatane.

6. Master Classes on Scripting, Documentary film making. Ms Samira Jain Delhi, Mr Prasanna Vithanage from Sri Lanka and Mr Harutyun Khachatryan from Armenia will participate.

7. Round table on promotion of Asian Cinema at various film festivals, initiatives by Network for promotion of Asian Cinema(NETPAC)

8. Interaction between film makers and Critics on Film Criticism– 90 years of FIPRESCI, a global collective of film critics

**All the above events are scheduled to be held in one of the screens at PVR cinemas.**

**Closing Ceremony and award distribution on the evening of February 5, 2016, at Mysuru in front of Mysuru Palace. All the invited guests and distinguished celebrities will participate. Mr. Nana Patekar, eminent Actor will be present. Kannada film industry will present the cultural show.**

**Mr. Kamal Hasan has been invited.**

**Delegate Registration:**

**Delegate registration will commence from tomorrow at: Badami House, N.R. Square, Bengaluru 560002 and Suchitra Film Society, BSK Stage, Bengaluru – 560070 premises, Information Dept., Office, Infantry Road, Karnataka Film Chamber of Commerce premises in Bengaluru and Information Department Office at Mysuru shortly.**

**Online registration facility is also available.**

**Delegate fee: Rs. 600/- for General public, and Rs 300/- for Students, Film Society members, Senior citizens and KFCC film family.**

Nearly 1000 delegates have already requested for registration.